## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸಿಂದಗಿ

ಸಿ.ಸಿ.ನಂ.173/2020

ಫಿರ್ಯಾದಿಃ ಕರ್ನಾಟಕ ರಾಜ್ಯ (ದೇವರ ಹಿಪ್ಪರಗಿ ಪೊಲೀಸ್ ಠಾಣೆ)

**ವಿರುದ್ಧ**

ಆರೋಪಿತರುಃ

1. ಶಿವಾನಂದ ತಂಃ ರಾಮಪ್ಪ ಕಬ್ಬಿನ (ಮೃತ)
2. ಶಿವಾನಂದ ತಂಃ ಮಲ್ಲಿಕಾರ್ಜುನ ಕಿರಿಣಗಿ<br>ವಯಸ್ಸುಃ 26 ವರ್ಷ, ಉದ್ಯೋಗಃ ಲಾರಿ ಡ್ರೈವರ,<br>ಸಾಃ ಇಬ್ರಾಹಿಂಪೂರ, ತಾಃ ದೇವರ ಹಿಪ್ಪರಗಿ<br>ಜಿಃ ವಿಜಯಪುರ.

### ಆರೋಪಣೆ

ದಿನಾಂಕ 10.01.2020 ರಂದು ರಾತ್ರಿ 08.30 ಗಂಟೆ ಸುಮಾರಿಗೆ ದೇವರ ಹಿಪ್ಪರಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಕಲಬುರ್ಗಿ - ವಿಜಯಪುರ ರಾಜ್ಯ ಹೆದ್ದಾರಿ - 50 ರ ಮೇಲೆ ಬರುವ ಹುಂಡೇಕಾರ ಇಟ್ಟಂಗಿ ಬಟ್ಟಿ ಹತ್ತಿರ ರಸ್ತೆಯ ಮೇಲೆ ಎರಡನೇ ಆರೋಪಿಯಾದ ನೀನು ನಿನ್ನ ಲಾರಿ ನಂ.ಕೆಎ-02/ಎಬಿ-0283 ನೇದ್ದನ್ನು ಯಾವುದೇ ಮುನ್ನೆಚ್ಚರಿಗೆ ವಹಿಸದೇ ಕತ್ತಲೆಯಲ್ಲಿ ನಿನ್ನ ಲಾರಿಯನ್ನು ರೋಡ ಮದ್ಯದಲ್ಲಿ ನಿಲ್ಲಿಸಿ ಹೊಗಿದ್ದರಿಂದ ಮೃತ ಆರೋಪಿ ನಂಃ1 (ಶಿವಾನಂದ) ಇತನು ತನ್ನ ಮೋಟಾರ ನಂ.ಕೆಎ-15/ಆರ್-9345 ನೇದ್ದರ ಮೇಲೆ ಹೋಗುವಾಗ ಆರೋಪಿ ನಂಃ1 ಇವರಿಗೆ ನಿನ್ನ ಲಾರಿ ಕಾಣಿಸದಿದ್ದರಿಂದ ಅದಕ್ಕೆ ಡಿಕ್ಕಿಪಡಿಸಿ ಅಪಘಾತವಾಗಿದ್ದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 283 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಎರಡನೇ ಆರೋಪಿಯಾದ ನೀನು ಲಾರಿ ನಂ.ಕೆಎ-02/ಎಬಿ-0283 ನೇದ್ದನ್ನು ಕಲಬುರ್ಗಿ - ವಿಜಯಪುರ ಕಡೆಗೆ ಹೋಗುವ ರಸ್ತೆ ಮೇಲೆ ಯಾವುದೇ ಮುನ್ನೆಚ್ಚರಿಗೆ ವಹಿಸದೇ ಕತ್ತಲೆಯಲ್ಲಿ ನಿನ್ನ ಲಾರಿಯನ್ನು ರೋಡ ಮದ್ಯದಲ್ಲಿ ನಿಲ್ಲಿಸಿ ಹೊಗಿದ್ದರಿಂದ ಮೃತ ಆರೋಪಿ ನಂಃ1 (ಶಿವಾನಂದ) ಇತನು ತನ್ನ ಮೋಟಾರ ನಂ.ಕೆಎ-15/ಆರ್-9345 ನೇದ್ದರ ಮೇಲೆ ಹೋಗುವಾಗ ಇವರಿಗೆ ನಿನ್ನ ಲಾರಿ

ಕಾಣಿಸದಿದ್ದರಿಂದ ಅದಕ್ಕೆ ಡಿಕ್ಕಿಪಡಿಸಿ ಅಪಘಾತವಾಗಿದ್ದು, ಸದರಿ ಅಪಘಾತದಲ್ಲಿ ಆರೋಪಿ ನಂಃ1 (ಶಿವಾನಂದ) ತೀವ್ರ ಸ್ವರೂಪದ ಗಾಯ ಹೊಂದಿದ್ದು ಮತ್ತು ದಿಃ14.01.2020 ರಂದು ಹೆಚ್ಚಿನ ಉಪಚಾರ ಕುರಿತು ಬಿಎಲ್‌ಡಿ ಆಸ್ಪತ್ರೆ ವಿಜಯಪೂರದಲ್ಲಿ ದಾಖಲ ಮಾಡಿದ್ದು ಉಪಚಾರ ಪಲಿಸದ ಕಾರಣ ದಿಃ 15.01.2020 ರಂದು ಸಾಯಂಕಾಲ 6-49 ಘಂಟೆಗೆ ಮೃತಪಟ್ಟಿದ್ದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 304 (ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಎರಡನೇ ಆರೋಪಿಯಾದ ನೀನು ಲಾರಿ ನಂ.ಕೆಎ-02/ಎಬಿ-0283 ನೇದ್ದನ್ನು ಕಲಬುರ್ಗಿ - ವಿಜಯಪುರ ಕಡೆಗೆ ಹೋಗುವ ರಸ್ತೆ ಮೇಲೆ ಯಾವುದೇ ಮುನ್ನೆಚ್ಚರಿಗೆ ವಹಿಸದೇ ಕತ್ತಲೆಯಲ್ಲಿ ನಿನ್ನ ಲಾರಿಯನ್ನು ರೋಡ ಮದ್ಯದಲ್ಲಿ ನಿಲ್ಲಿಸಿ ಹೊಗಿದ್ದರಿಂದ ಮೃತ ಆರೋಪಿ ನಂಃ1 (ಶಿವಾನಂದ) ಇತನು ತನ್ನ ಮೋಟಾರ ನಂ.ಕೆಎ-15/ಆರ್-9345 ನೇದ್ದರ ಮೇಲೆ ಹೋಗುವಾಗ ಆರೋಪಿ ನಂಃ1 ಇವರಿಗೆ ನಿನ್ನ ಲಾರಿ ಕಾಣಿಸದೇ ಅದಕ್ಕೆ ದಡಿಕ್ಕಿಪಡಿಸಿ ಅಪಘಾತವಾಗಿದ್ದು, ಸದರಿ ವಿಷಯವನ್ನು ಹತ್ತಿರದ ಪೊಲೀಸ್ ಠಾಣೆಗೆ ತಿಳಿಸದೇ ಹಾಗೂ ಆರೋಪಿ ನಂಃ1 (ಶಿವಾನಂದ) ಇವರಿಗೆ ಚಿಕಿತ್ಸೆ ಕೊಡಿಸದೇ ಓಡಿ ಹೋಗಿದ್ದು, ಆ ಮೂಲಕ ಮೋಟಾರು ವಾಹನ ಕಾಯ್ದೆ ಕಲಂ 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಸದರಿ ಆರೋಪವು ನ್ಯಾಯಾಲಯದ ವ್ಯಾಪ್ತಿಯಲ್ಲಿದ್ದು, ಈ ನ್ಯಾಯಾಲಯದಿಂದ ಸದರಿ ಆರೋಪಕ್ಕೆ ನಿಮ್ಮನ್ನು ವಿಚಾರಣೆಗೆ ಒಳಪಡಿಸಲಾಗುವುದು.

ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಿಂದಗಿ.

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸಿಂದಗಿ

ಸಿ.ಸಿ.ನಂ.**173/2020**

ಪಿರ್ಯಾದಿದಾರರುಃ ದೇವರ ಹಿಪ್ಪರಗಿ ಪೋಲಿಸ್ ಠಾಣೆ.

ವಿರುದ್ಧ

ಆರೋಪಿ ನಂಃ2: ಶಿವಾನಂದ ತಂಃ ಮಲ್ಲಿಕಾರ್ಜುನ ಕಿರಿಣಗಿ
ವಯಸ್ಸುಃ 26 ವರ್ಷ, ಉದ್ಯೋಗಃ ಲಾರಿ ಡ್ರೈವರ,
ಸಾಃ ಇಬ್ರಾಹಿಂಪೂರ, ತಾಃ ದೇವರ ಹಿಪ್ಪರಗಿ
ಜಿಃ ವಿಜಯಪುರ.

1. ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?

ಉಃ

2. ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೇ?

ಉಃ

ದಿನಾಂಕಃ 17.07.2025 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಿದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಿಂದಗಿ.